ಅಧ್ಯಕ್ಷರು.— ಭರವಸೆ ಕೊಟ್ಟಿದ್ದು ಯಾರು ?

SRI M. MALLIKARJUNA KHARGE.— The previous Government assured.

ಅಧ್ಯಕ್ಷರು.— ಯಾವಾಗ ?

SRI M. MALLIKARJUNA KHARGE.— In the last session. ಅಂದರೆ ೧೯೮೭ ರಲ್ಲಿ.

MR. SPEAKER.— If it was on the floor of the House, it must be in the proceedings.

SRI M. MALLIKARJUNA KHARGE.— It is part of the proceedings then ಇರಲಿ. ದಯವಿಟ್ಟು ತಾವು ಇದನ್ನು ಇದೇ ಅಧಿವೇಶನದಲ್ಲಿ ತರುತ್ತಿರಾ ? ಅಥವಾ ಆರ್ಡಿನೆನ್ಸ್ ಮುಖಾಂತರ ಇದನ್ನು ಬದಲಾವಣೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ — ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಮ್ಮ ಪಾರ್ಟಿಯಲ್ಲಿ ಈ ಎಲ್ಲಾ ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಚರ್ಚೆ ಮಾಡಿದನಂತರ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಗ್ರಾಮಿಣಾಭಿವೃದ್ಧಿ ಸಚಿವರು ಏನು ಈ ವಿಷಯವನ್ನು ಪ್ರಸ್ತಾಪ ಮಾಡಿ ಸದನಕ್ಕೆ ತಿಳಿಸಿದ್ದಾರೆ; ಅದು ನಿಜಾಂಶ ನಾವು ಈ ಸದನದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಮಸೂದೆಯನ್ನು ಪಾಸ್ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಶ್ರೀ ನಜೀರಸಾಬ್ ಅವರು ಮಂತ್ರಿಯಾಗಿದ್ದರು. ಆಗ ಶ್ರೀ ಖರ್ಗೆಯವರು ಮತ್ತು ಶ್ರೀ ವೊಯಿಲಿಯವರು ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕೆಂದು ಮಾಡಿದಾಗ, ಅವರು ಅಫಿಶಿಯಲ್ ಆಗಿಯೇ ಅದನ್ನು ಮೂವ್ ಮಾಡಿದರು. ಆದರೆ ನೀವು ಅದನ್ನು ವಿತ್‌ಡ್ರಾ ಮಾಡಿಕೊಳ್ಳಿ, ನಾವು ಬೇಕಾದಷ್ಟು ಅಮೆಂಡ್‌ಮೆಂಟ್‌ಗಳನ್ನು ಮಾಡಬೇಕಾಗುತ್ತದೆ, ಈ ಪಾಯಿಂಟ್‌ಅನ್ನು ಕನ್ಸಿಡರ್ ಮಾಡುತ್ತೇವೆ ಎಂದು ನಾವು ಹೇಳಿದ್ದುದು ನಿಜ.

೧೧-೩೦ ಎ. ಎಂ.

ಇದಾದ ನಂತರ. ಸಬ್ಸಿಕ್ವೆಂಟ್ ಆಗಿ ಕ್ಯಾಬಿನೆಟ್‌ನಲ್ಲಿ ಒಂದು ಸಬ್ ಕಮಿಟಿ ಸಹ ಆಯಿತು. ಆದರ ಹೆಡ್ ಕಮ್ ಏನಾಯಿತು ಎಂದು ನನಗೆ ಜ್ಞಾಪಕ ಇಲ್ಲ. ಆದರೆ ಮಾನ್ಯ ಮಂತ್ರಿಗಳು, ಈ ವಿಚಾರ ಕನ್‌ಸಿಡರೇಷನ್‌ನಲ್ಲಿದೆ ಎಂದು ಹೇಳಿದ್ದಾರೆ. ನಮ್ಮ ಪಕ್ಷದ ವತಿಯಿಂದ ಇದನ್ನು ಸ್ವಾಗತ ಮಾಡುತ್ತೇವೆ. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಜಿಲ್ಲಾ ಪರಿಷತ್ ಅಧ್ಯಕ್ಷರು, ಉಪಾಧ್ಯಕ್ಷರು, ಮಂಡಲ್ ಪಂಚಾಯ್ತಿ ಪ್ರಧಾನರು. ಉಪ ಪ್ರಧಾನರಾಗಲು ಮತ್ತು ಮಂಹಿಳೆಯರಿಗೂ ಸೂಕ್ತ ಪ್ರಾತಿನಿಧ್ಯ ಇರಬೇಕೆಂಬ ನಿಮ್ಮ ಕಳಕಳಿಯನ್ನು ನಾವು ಸ್ವಾಗತ ಮಾಡುತ್ತೇವೆ

ಬೀದರ್ ಜಿಲ್ಲೆಯಲ್ಲಿರುವ ಆರೋಗ್ಯಾಧಿಕಾರಿಗಳ ಸಂಖ್ಯೆ

೧೧೬೦. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೀದರ್ ಜಿಲ್ಲೆಯಲ್ಲಿರುವ ಆರೋಗ್ಯ ಅಧಿಕಾರಿಗಳ ಹಾಗೂ ಮಹಿಳಾಆರೋಗ್ಯ ಅಧಿಕಾರಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ಕೊಡುವುದು.

ಆ) ನಿಗದಿತ ಪ್ರಮಾಣದಲ್ಲಿ ಆರೋಗ್ಯಾಧಿಕಾರಿಗಳು ಹಾಗೂ ಮಹಿಳಾ ಆರೋಗ್ಯಾಧಿಕಾರಿಗಳು ಇದ್ದಾರೆಯೆ ?

ಇ) ಹಾಗಿಲ್ಲದಿದ್ದಲ್ಲಿ ಎಷ್ಟು ಆರೋಗ್ಯ ಅಧಿಕಾರಿಗಳು ಮತ್ತು ಮಹಿಳಾ ಆರೋಗ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

ಈ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾದವರು ಕೈಗೊಂಡ ಕ್ರಮ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬೀದರ್ ಜಿಲ್ಲೆಯಲ್ಲಿ ಆರೋಗ್ಯಾಧಿಕಾರಿ ಹಾಗೂ ಮಹಿಳಾ ಆರೋಗ್ಯಾಧಿಕಾರಿಗಳ ಸಂಖ್ಯೆ ಈ ಕೆಳಕಂಡಂತೆ ಇವೆ.

	ಪುರುಷ	ಮಹಿಳೆ
೧) ಜಿಲ್ಲಾ ಆರೋಗ್ಯ ಮತ್ತು ಕು. ಕ. ಅಧಿಕಾರಿ	೨	—
೨) ಜಿಲ್ಲಾ ಶಸ್ತ್ರ ಚಿಕಿತ್ಸಕರು	೧	—
೩) ಉಪ ಶಸ್ತ್ರ ಚಿಕಿತ್ಸಕರು	೧೧	೧
೪) ಸಹಾಯಕ ಶಸ್ತ್ರ ಚಿಕಿತ್ಸಕರು	೮೪	೧೩
೫) ಉಪ ದಂತ ಶಸ್ತ್ರ ಚಿಕಿತ್ಸಕರು	—	೧
೬) ಸಹಾಯಕ ದಂತ ಶಸ್ತ್ರ ಚಿಕಿತ್ಸಕರು	೨	—
	೧೦೦	೧೫

ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ವಂಜೂರಾದ ಹುದ್ದೆಗಳು ಇವೆ.

	ಬೀದರ್	ಔರಾದ್	ಬಾಲ್ಕಿ	ಹುಮನಾಬಾದ್	ಬಸವಕಲ್ಯಾಣ
ಜಿಲ್ಲಾ ಆಕರ ಅಧಿಕಾರಿ	೨	...	...	...	...
ಜಿಲ್ಲಾ ಶಸ್ತ್ರ ಚಿಕಿತ್ಸಕರು	೧	...	...	...	...
ಉಪಶಸ್ತ್ರ ಚಿಕಿತ್ಸಕರು	೧೦	...	...	...	...
ಸಹಾಯಕ ಶಸ್ತ್ರ ಚಿಕಿತ್ಸಕರು	೩೪	೧೭	೧೭	೧೬	೧೩
ಪುರುಷ	(೩೧)	(೧೪)	(೧೪)	(೧೩)	(೧೨)
ಮಹಿಳೆ	(೩)	(೩)	(೩)	(೩).	(೧)
ಉಪದಂತ ಶಸ್ತ್ರ ಚಿಕಿತ್ಸಕರು	೧	...	...	...	....
ಸಹಾಯಕ ದಂತ ಶಸ್ತ್ರ ಚಿಕಿತ್ಸಕರು	...	...	೧	೧	....
	೪೮	೧೭	೧೮	೧೭	೧೫

ಆ) ನಿಗದಿತ ಪ್ರಮಾಣಕ್ಕಿಂತಲೂ ಕಡಿಮೆ ಇದ್ದಾರೆ.

ಇ) ಆರೋಗ್ಯಾಧಿಕಾರಿ ಹಾಗೂ ಮಹಿಳಾ ಆರೋಗ್ಯಾಧಿಕಾರಿಗಳ ಹುದ್ದೆಗಳು ಈ ಕೆಳಕಂಡಂತೆ ಇವೆ.

	ಪುರುಷ ಆರೋಗ್ಯಾಧಿಕಾರಿ	ಮಹಿಳಾ ಆರೋಗ್ಯಾಧಿಕಾರಿ
ಜಿಲ್ಲಾ ಆರೋಗ್ಯಾಧಿಕಾರಿಗಳು	ಖಾಲಿ ಇಲ್ಲ	...
ಜಿಲ್ಲಾ ಶಸ್ತ್ರ ಚಿಕಿತ್ಸಕರು	ಖಾಲಿ ಇಲ್ಲ	...
ಉಪ ಶಸ್ತ್ರ ಚಿಕಿತ್ಸಕರು	ಖಾಲಿ ಇಲ್ಲ	...
ಸಹಾಯಕ ಶಸ್ತ್ರ ಚಿಕಿತ್ಸಕರು	೮	೭
ಸಹಾಯಕ ದಂತ ಶಸ್ತ್ರ ಚಿಕಿತ್ಸಕರು	೧	...
	೯	೭

ಈ) ನೇಮಕಾತಿ ಮಾಡುವ ಬಗ್ಗೆ ಇರುವ ನಿರ್ಬಂಧವನ್ನು ಸಡಿಲಗೊಳಿಸಿದ ಆದೇಶವನ್ನು ಪಡೆದ ನಂತರ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಮಾನ್ಯ ಅಧ್ಯಕ್ಷರೇ, ಮಹಿಳಾ ಆರೋಗ್ಯಾಧಿಕಾರಿಗಳ ಎಷ್ಟು ಜಾಗ ಖಾಲಿ ಇವೆ ಎಂದು ಕೇಳಿರುವುದಕ್ಕೆ, ೭ ಹುದ್ದೆಗಳು ಖಾಲಿ ಇವೆಯೆಂದು ಪುರುಷ ಆರೋಗ್ಯಾಧಿಕಾರಿಗಳು ೯ ಎಂದು ಉತ್ತರದಲ್ಲಿ ಹೇಳಿದ್ದಾರೆ, ನಿಜವಾಗಿ ನೋಡಿದರೆ, ಪುರುಷ ಆರೋಗ್ಯಾಧಿಕಾರಿಗಳ ಹುದ್ದೆಗಳು ೧೬ ಜಾಗ ಖಾಲಿ ಇವೆ. ಈ ಬಗ್ಗೆ ಮಾಹಿತಿ ನನ್ನ ಹತ್ತಿರ ಇದೆ. ಪ್ರತಿಯೊಂದು ಆಸ್ಪತ್ರೆಗಳಲ್ಲೂ ಒಬ್ಬರೇ ಡಾಕ್ಟರು ಇದ್ದಾರೆ, ಈ ಖಾಲಿ ಜಾಗಗಳು ಸುಮಾರು ೩-೪ ವರ್ಷಗಳಿಂದ ಖಾಲಿ ಇವೆ. ಈ ೧೬ ಪುರುಷ ವೈದ್ಯರು ಮತ್ತು ೭ ಜನ ಮಹಿಳಾ ವೈದ್ಯರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಈಗ ಬೆರದ್ ತಾಲ್ಲೂಕಿನಲ್ಲಿ ಕಾಲರಾ ಜಾಸ್ತಿಯಾಗಿದೆ, ಯಾರೂ ಡಾಕ್ಟರುಗಳೂ ಇಲ್ಲ. ಇಂತಹ ಸಂದರ್ಭದಲ್ಲಿ ಡಾಕ್ಟರುಗಳನ್ನು ಭರ್ತಿ ಮಾಡುವುದಿಲ್ಲವೆಂದು ಹೇಳಿದರೆ, ಆಲ್ಲಿಯ ಜನಗಳ ಗತಿ ಏನು ? ಮಹಿಳಾ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ. ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ನಮ್ಮ ಇಲಾಖಾ ಬೇಡಿಕೆಯ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದ್ದೇನೆ. ಸುಮಾರು ಐನೂರರ ತನಕ ವೈದ್ಯರ ಹುದ್ದೆಗಳು ಖಾಲಿ ಇವೆ, ಈ ವಿಚಾರದಲ್ಲಿ ಕ್ಯಾಬಿನೆಟ್‌ನಲ್ಲೂ ತೀರ್ಮಾನ ಕೈಗೊಂಡಿದ್ದೇವೆ. ಅತಿ ಶೀಘ್ರದಲ್ಲಿಯೇ, ಪಿ. ಎಸ್. ಸಿ. ಗೆ ನಮ್ಮ ಖಾಲಿ ಜಾಗಗಳ ಪಟ್ಟಿಯನ್ನು ಕಳುಹಿಸಿ ಕೊಟ್ಟು, ಅಲ್ಲಿಂದ ಸೆಲೆಕ್ಟ್ ಆದ ಮೇಲೆ ಈ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಎಷ್ಟು ದಿವಸದಲ್ಲಿ ಭರ್ತಿ ಮಾಡುತ್ತೀರಿ, ಮುಂದಿನ ವರ್ಷ ಭರ್ತಿ ಮಾಡುತ್ತೀರಾ ? ಅಥವಾ ಆಲ್ಲಿ ಕಾಲರಾದಿಂದ ಎಲ್ಲರೂ ಸತ್ತ ಮೇಲೆ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ಸ್ವಾಮಿರಾವ್.—ಈ ಖಾಲಿ ಹುದ್ದೆಗಳು ನಿಮ್ಮ ಕಾಲದಿಂದಲೂ ಸಹ ಉಳಿದುಕೊಂಡು ಬಂದಿವೆ.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು, ಐನೂರಾ ಜನ ರೆಕ್ರೂಟ್‌ಮೆಂಟ್ ಆದತಕ್ಷಣ ಪೋಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಬೀದರ್ ಜಿಲ್ಲೆಗೆ ಖಾಲಿ ಇರತಕ್ಕ ಜಾಗಗಳಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಿದರೆ ಯಾರೂ ಹೋಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ನೇಮಕ ಮಾಡಿ ಕಳುಹಿಸಿದರೆ ಅನುಕೂಲವಾಗುತ್ತದೆ. ಮಹಿಳಾ ವೈದ್ಯರು ಒಬ್ಬರೂ ಹೋಗುವುದಿಲ್ಲ. ಈಗ್ಗೆ ಸುಮಾರು ೭ ವರ್ಷಗಳಿಂದ ಮಹಿಳಾ ವೈದ್ಯರ ಹುದ್ದೆಗಳು ಖಾಲಿ ಇವೆ. ಆದ್ದರಿಂದ ಲೋಕಲ್ ಕ್ಯಾಂಡಿಡೇಟ್ಸ್ ಕೊಟ್ಟು, ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ಭರ್ತಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ತುಂಬಾ ಕಷ್ಟ ಪರಿಸ್ಥಿತಿ ಇದ್ದರೆ, ಡೆಪ್ಯುಟೇಷನ್ ಮೇಲೆ ವೈದ್ಯರನ್ನು ಅಲ್ಲಿಗೆ ಕಳುಹಿಸಿಕೊಡಲು ವ್ಯವಸ್ಥೆ ಮಾಡುತ್ತೇವೆ. ಈ ಖಾಲಿ ಹುದ್ದೆಗಳು ಈಗ್ಗೆ ೩-೪ ವರ್ಷಗಳಿಂದ ಭರ್ತಿ ಆಗದೆ ಉಳಿದುಕೊಂಡು ಬಂದಿವೆ. ಹಿಂದಿನ ವಿಚಾರ ಹೇಳಿದರೆ ತಮಗೆ ಬೇಜಾರಾಗುತ್ತದೆ.

ಅಧ್ಯಕ್ಷರು.—೩೪೧ (೧೧೧೪) ಪ್ರಶ್ನೆಯನ್ನು ಹೆಚ್. ಯು. ಡಿ. ಗೆ ವರ್ಗಾವಣೆ ಮಾಡಲಾಗಿದೆ.

ಸಾಮಾಜಿಕ ಅರಣ್ಯ ಯೋಜನಾ ಹಣದ ದುರುಪಯೋಗ

೮೭೩. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆ (ಸೋಷಿಯಲ್ ಫಾರೆಸ್ಟ್ರಿ ಸ್ಕೀಮ್)ಗಾಗಿ ಇರುವ ಹಣದ ದುರುಪಯೋಗದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದರೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?